ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ
ಸ್ಪೇಷಲ್.ಸಿ (ಎಸ್.ಸಿ/ಎಸ್.ಟಿ) ಸಂಖ್ಯೆ 52/2021

**ಫ್ರಾಸಾ–4**
**ಚಾಸಾ–7**

| | |
|---|---|
| ಸಾಕ್ಷಿದಾರನ/ಳ ಹೆಸರು | : ಶೋಭಾ |
| ತಂದೆ/ಗಂಡನ ಹೆಸರು | : ಭರತ ಶಿಂಧೆ |
| ವಯಸ್ಸು | : 35 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸಸ್ಥಳ | : ಕಾಳಗಾಪೂರ |

ದಿನಾಂಕ: 21–7–2025 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು :

ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರವರಿಂದ :

1. ಚಾಸಾ 1 ನನ್ನ ತಂಗಿ. ಚಾಸಾ 6 ನನ್ನ ಭಾವ. ಚಾಸಾ 8 ಮತ್ತು 9 ಗೊತ್ತು.
2. 4 ವರ್ಷದ ಹಿಂದೆ ಆರೋಪಿಗಳು ಚಾಸಾ 1 ರವರ ಮನೆಗೆ ಬಂದು ಗಲಾಟೆ ಮಾಡಿದರು. ಆಗ ರಾತ್ರಿ 12.30 ಗಂಟೆಯಾಗಿತ್ತು. ಆಗ ನನ್ನ ತಂಗಿ ನನಗೆ ಫೋನ್ ಮಾಡಿದರು. ನಾನು ಚಾಸಾ 1 ರವರ ಮನಗೆ ಹೋಗಿ ಆಕೆಯನ್ನು ನಮ್ಮ ಮನೆಗೆ ಕರೆದುಕೊಂಡು ಹೋದೆ. ನಾನು ಚಾಸಾ 1 ರವರ ಮನೆಗೆ ಹೋದಾಗ ಆರೋಪಿ ಚಾಸಾ 1 ಮತ್ತು 6 ರವರಿಗೆ ಹೊಡೆ ಬಡಿ ಮಾಡುತ್ತಿದ್ದರು ಮತ್ತು ಹೊಲಸು ಶಬ್ದಗಳಿಂದ ಬೈಯುತ್ತಿದ್ದರು. ಹಲ್ಕಿ ಕುಲ ಎಂದು ಬೈದರು. ನಾನು ಚಾಸಾ 1 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದೆ. ಆರೋಪಿಗಳು ಅಲ್ಲಿಗೂ ಬಂದು ನಮ್ಮ ಮನೆಯ ಹೊರಗಡೆ ತಿರುಗಾಡುತ್ತಿದ್ದರು. ನಾನು ಮತ್ತು ಚಾಸಾ 1 ಎಸ್.ಸಿ ಹೊಲೆಯ

ಜಾತಿಯವರು. ಆರೋಪಿಗಳು ಮರಾಠ ಜನಾಂಗದವರು. ಎಲ್ಲ ವಿಚಾರವನ್ನು ಪೊಲೀಸರಿಗೆ ಹೇಳಿದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲವೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ :

3. ನಾನು ಚಾಸಾ 1 ರವರ ಮನೆಗೆ ಹೋದಾಗ ಆರೋಪಿಗಳು ಕೈಯಲ್ಲಿ ಬಡಿಗೆ ಹಿಡಿದುಕೊಂಡು ನಿಮ್ಮನ್ನು ಹೊಡೆದುಹಾಕುತ್ತೇವೆ ಎಲ್ಲಿ ಹೋದರು ನಿಮ್ಮನ್ನು ಬಿಡುವುದಿಲ್ಲ ಅಂತ ಹೊಲಸು ಶಬ್ದಗಳಿಂದ ಬೈದು ಚಾಸಾ 1 ರವರ ಸಿರೆ ಹಿಡಿದು ಎಳೆದಾಡಿ ಕೈ ಹಿಡಿದು ನೂಕಿದರು ಎಂದರೆ ಸರಿ. ನನ್ನ ಕೈಯ ಬಳೆಗಳು ಒಡೆದಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಬಡಿಗೆಯಿಂದ ಚಾಸಾ 6 ರವರಿಗೆ ಹೊಡೆದು 2 ನೇ ಆರೋಪಿ ಕಬ್ಬಿಣದ ಹಂಚ ತೆಗೆದುಕೊಂಡು ಚಾಸಾ 6 ರವರ ಕುತ್ತಿಗೆಗೆ ಹೊಡೆದು ಜೀವ ಬೇದರಿಕೆ ಹಾಕಿದರು ಎಂದರೆ ಸರಿ. ನಾನು ಚಾಸಾ 8 ಮತ್ತು 9 ಜಗಳ ಬಿಡಿಸಿದೇವು ಎಂದರೆ ಸರಿ. ಸಾಕ್ಷಿಯು ಮು.ಮಾಲು 1 ರಿಂದ 4 ನ್ನು ನೋಡಿ ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ್ದವು ಮತ್ತು ಗಾಜಿನ ಚೂರು ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಎ.ಕೆ.ಜೆ. ವಕೀಲರಿಂದ :

4. ಚಾಸಾ 1 ರವರ ಮನೆಯಿಂದ ನಮ್ಮ ಮನೆಗೆ ಒಂದು ಕಿ.ಮೀ ಆಗುತ್ತದೆ. ನಾನು ಮತ್ತು ನನ್ನ ಗಂಡ ಇಬ್ಬರು ಚಾಸಾ 1 ರವರ ಮನೆಗ ಓಡಿಕೊಂಡು

ಹೋದೇವು. ನಾನು ಅಲ್ಲಿಗೆ ಹೋದಾಗ ಆಜುಬಾಜುದಾರರು ಯಾರು ಇರಲಿಲ್ಲ. ಚಾಸಾ 1 ಮತ್ತು 6 ಮಾತ್ರ ಇದ್ದರು ಆಗ ಮಳೆ ಬರುತ್ತಿತ್ತು ಮತ್ತು ಕರೆಂಟ ಇರಲಿಲ್ಲ ಎಂದರೆ ಸರಿ. ಚಾಸಾ 1 ರವರು ಮೈದುನನ ಹೆಸರು ವಿನೋದ. ಚಾಸಾ 6 ಮತ್ತು ವಿನೋದ ಬೇರೆ ಬೇರೆ ಆಗಿ 8 ವರ್ಷವಾಯಿತು. ವಿನೋದ ಮತ್ತು ಚಾಸಾ 1 ರವರ ಮನೆ ಒಂದೇ ಕಡೆ ಇದ್ದು ಮಧ್ಯದಲ್ಲಿ ಅಡ್ಡಗೋಡೆ ಇದೆ ಎಂದರೆ ಸರಿ. ಆರೋಪಿಗಳು ಹೈದ್ರಾಬಾದನಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ನಮ್ಮ ಮನೆಗೆ ಜಗಳ ಮಾಡಲು ಬಂದಿದರು ಎನ್ನುತ್ತಾರೆ. ಚಾಸಾ 1 ರವರ ಮನೆಗೆ ಮತ್ತು ನಮ್ಮ ಮನೆಗೆ ಎರಡು ಕಡೆ ಬಂದಿದರು. ಯಾವ ಕಾರಣಕ್ಕೆ ಜಗಳವಾಗುತ್ತಿತ್ತು ಎಂದು ನೀವು ಕೇಳಿದ್ದಿರಾ ಎಂದರೆ ಅವರು ಕುಡಿದುಕೊಂಡು ಬಂದಿದರು ಎನ್ನುತ್ತಾರೆ. ಆರೋಪಿಗಳ ಮತ್ತು ಚಾಸಾ 1 ರವರ ನಡುವೆ ಯಾವುದೇ ವೈರತ್ವ ಇರಲಿಲ್ಲ ಎಂದರೆ ಸರಿ. ಆರೋಪಿಗಳು ಮತ್ತು ವಿನೋದ ಪಾರ್ಟಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಚಾಸಾ 6 ಆರೋಪಿಗಳು ಗಲಾಟೆ ಮಾಡುತ್ತಿದ್ದಾರೆ ಎಂದು ವಿನೋದನ ಮನೆಗೆ ಹೋಗಿ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು 6 ರವರಿಗೆ ಆರೋಪಿಗಳು ಹೊಡೆದಿಲ್ಲ, ಬೈದಿಲ್ಲ ಆದರೂ ಚಾಸಾ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5–6 ಬಳೆಗಳು ಒಡೆದಿದ್ದರು. ಪೊಲೀಸರು ನಾನು ಬಳೆಯ ಚೂರುಗಳು ಕೊಡಲಿಲ್ಲ. ಚಾಸಾ 6 ಮತ್ತು ವಿನೋದನ ನಡುವೆ ಆಸ್ತಿಗಾಗಿ ಜಗಳ ನಡೆಯುತ್ತಿತ್ತು ಎಂದರೆ ಸರಿಯಲ್ಲ.

ಆರೋಪಿಗಳು ವಿನೋದನಿಗೆ ಬೆಂಬಲ ನೀಡುತ್ತಾರೆ ಎಂದು ಚಾಸಾ 1 ಮತ್ತು 6 ಆರೋಪಿಗಳಿಗೆ ಹೊಡೆದರು ಎಂದರೆ ಸರಿಯಲ್ಲ. ಆರೋಪಿಗಳಿಗೆ ನಮ್ಮ ಮನೆ ಎಲ್ಲಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಕಾರ ನಂಬರ ನನಗೆ ಗೊತ್ತಿಲ್ಲ ಆದರೆ ಬಿಳಿ ಬಣ್ಣದಾಗಿತ್ತು. ಆರೋಪಿಗಳು ನಮ್ಮ ಮನೆಯ ಹತ್ತಿರ ಬಂದಾಗ ನಾನು ಅವರನ್ನು ಏನು ಕೇಳಲಿಲ್ಲ. ನಾನು ಪೊಲೀಸರಿಗೆ ಫೋನ್ ಮಾಡಲಿಲ್ಲ. ನಮ್ಮ ಮನೆಯಿಂದ ಕಾಳಗಾಪೂರ ಠಾಣೆ ಅರ್ಧ ಕಿ.ಮೀ ದೂರದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗಳು ವಿನೋದನಿಗೆ ಬೆಂಬಲ ನೀಡುತ್ತಾರೆ ಎಂದು ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿ ನೀಡಿದ ವಿಚಾರಣೆಯನ್ನು ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೆ.ಕೆ. ಸರಿ. ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೀದರ